ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ– 582 101
**Raitha Bhavana, General Cariappa Circle, Gadag – 582 101**
**E-mail: ksrdpru@gmail.com** **Phone: 08372-230338, Fax: 08372-297343**

**ದಿನಾಂಕ 29ನೇ ಏಪ್ರಿಲ್ 2019 ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ ಸಭಾ ಭವನದಲ್ಲಿ ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಯ ನಡವಳಿಗಳು**

# PROCEEDINGS OF THE FIRST MEETING OF THE EXECUTIVE COUNCIL HELD ON 29-04-2019 IN THE MEETING HALL, KSRDPR UNIVERSITY, GADAG

## MEMBERS PRESENT:

1. Prof. Dr. B. Thimme Gowda
Vice Chancellor, KSRDPRU, — Chairperson

2. Prof. Dr. R.S. Deshpande, — Member
Former Director, Institute for Social and Economic Change (ISEC),
No. 405, 5th Main, 10th Cross, Teachers' Colony,
Nagarabhavi, Bengaluru-72

3. Shri G. B. Shivaraj, — Member
Vice-President, Gandhi Bhavan,
#181, Lakshmi Nivas, 2nd B Main Road, 6th Cross,
9th Block, Nagarbhavi 2nd Stage, Bengaluru-72.

4. Dr. Arun R. Patil, — Member
Adhiti, Adhyapakara Nagara, Hulkoti-582 205.

5. Shri B.G. Govindappa, Ex-MLA, — Member
Belaguru Village & Post,
Srirampura Hobli, Hosadugra – 577 527.

6. Shri Abdul Hakim, — Member
Social Worker, Educationist and Writer,
#3078, 1st Cross, Gayathrinagar, Bengaluru-21.

7. Prof. Dr. K.M. Hanumantharayappa, — Member
Professor & Principal, Dean, Faculty of Law (Retd.) and
Former Member, Karnataka State Law Commission,
#35, 1st Floor, 1st Main Road, Coconut Garden,
Nagarabhavi, Bengaluru-72.

8. Prof. T.V. Kattimani, — Member
Vice Chancellor, Indira Gandhi National Tribal University,
Amarakantak, Anuppur Dist. M.P.

B. Thimme Gowda

9. Smt. N. Jamuna Urs, Member
Home Scientist (Retd.), J.S.S. KVK, Mysuru,
# 904/7, 3rd Main Road, 1st Cross,
Vidyaranyapuram, Mysuru-570 008.

10. Dr. Prakash Bhat, Member
Former C.E.O., Society for Community Participation and
Empowerment (SCOPE), No.19, Bayalu, Hoysala Nagar,
Haliyala Road, Dharwad-580 003.

11. Prof. Dr. Suresh V. Nadagoudar
Registrar, KSRDPR University, Gadag Ex-officio Member Secretary

**MEMBERS NOT PRESENT:**

1. The Vice Chancellor
University of Agricultural Sciences, Bengaluru

2. The Vice Chancellor
Visvesvaraya Technological University, Belagavi.

3. The Principal Secretary to Government,
Rural Development and Panchayat Raj Department
Govt. of Karnataka, Bengaluru.

4. The Principal Secretary to Government,
Department of Agriculture, Govt. of Karnataka, Bengaluru.

5. The Principal Secretary to Government,
Social Welfare Department, Govt. of Karnataka, Bengaluru

6. The Principal Secretary to Government,
Labour Department, Govt. of Karnataka, Bengaluru

7. The Principal Secretary to Government,
Health Department, Govt. of Karnataka, Bengaluru

ಮೊದಲನೆಯದಾಗಿ ಕುಲಪತಿಗಳು ಸದಸ್ಯರನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪ್ರಥಮ ಸಭೆಗೆ ಹಾರ್ಥಿಕವಾಗಿ ಸ್ವಾಗತಿಸಿದರು ಹಾಗೂ ಪ್ರತಿಯೊಬ್ಬರನ್ನು ಸಭೆಗೆ ಪರಿಚಯಿಸಿದರು. ನಂತರ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಇಲ್ಲಿಯವರೆಗಿನ ಅಭಿವೃದ್ಧಿ ಮತ್ತು ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಅಲ್ಲದೆ, ವಿಶ್ವವಿದ್ಯಾಲಯದ ಮುಂದಿರುವ ಆದ್ಯತೆಗಳು ಮತ್ತು ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿ ಒದಗಿಸಬೇಕಾದ ಸೌಲಭ್ಯಗಳು, ಅಧ್ಯಾಪಕರ ನೇಮಕಾತಿ, ಯು.ಜಿ.ಸಿ. 12(B) ಯ ಮಾನ್ಯತೆ, NAAC, NRIF ಮಾನ್ಯತೆ ಮುಂತಾದವುಗಳ ಸವಾಲುಗಳನ್ನು ಸದಸ್ಯರ ಗಮನಕ್ಕೆ ತಂದರು. ವಿಶ್ವವಿದ್ಯಾಲಯದ ಉದ್ದೇಶಗಳನ್ನು ಸಾಕಾರಗೊಳಿಸಲು ಹಾಗೂ ಅದರ ಸರ್ವತೋಮುಖ ಬೆಳವಣಿಗೆಗೆ ಸದಸ್ಯರ ಸಲಹೆ, ಸಹಕಾರ ಮತ್ತು ಒಮ್ಮತದ ಅಭಿಪ್ರಾಯಗಳನ್ನು ಕುಲಪತಿಗಳು ಕೋರಿದರು.

ಕುಲಸಚಿವರು ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳನ್ನು ಪವರ್ ಪಾಯಿಂಟ್ ಮೂಲಕ ಪ್ರಸ್ತುತ ಪಡಿಸಿದರು.

B. Thimmegowda

ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸಭೆಯಲ್ಲಿ ಹಂಚಿಕೊಳ್ಳುತ್ತಾ ಕುಲಪತಿಗಳು, ಕುಲಸಚಿವರು, ವಿತ್ತಾಧಿಕಾರಿಗಳು ಗೌರವ ಪ್ರಾಧ್ಯಾಪಕರು ಅತಿಥಿ ಉಪನ್ಯಾಸಕರು ಹಾಗೂ ಇತರ ಆಡಳಿತ ಸಿಬ್ಬಂದಿಗಳ ಪ್ರಯತ್ನಗಳು, ಕಾರ್ಯತತ್ಪರತೆ ಮೂಲಕ ಅಲ್ಪಾವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಭದ್ರ ಬುನಾದಿ ಹಾಕಿರುವುದಕ್ಕೆ ಹಾಗೂ ಸಿಬ್ಬಂದಿಯ ಕೊರತೆಯಿದ್ದರೂ ಅಲ್ಪಾವಧಿಯಲ್ಲಿ ಹಲವಾರು ಚಟುವಟಿಕೆಗಳನ್ನು ಪ್ರಾರಂಭಿಸಿರುಸುವುದಕ್ಕೆ ಸಂತೋಷ ಹಾಗೂ ಮೆಚ್ಚುಗೆ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ತಮ್ಮ ಸಹಕಾರವಿರುವುದಾಗಿ ತಿಳಿಸಿದರು.

ತದನಂತರ, ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ನಲ್ಲಿ ಕಟ್ಟಡ ನಿರ್ಮಾಣಕ್ಕೆ ನೀಲಿ ನಕ್ಷೆ, ಕಟ್ಟಡಗಳ ವಿನ್ಯಾಸಗಳನ್ನು ತಯಾರಿಸಲು ಆಯ್ಕೆಮಾಡಿರುವ ಮಾನ್ಯ ಕೆಂಬಾವಿ ವಾಸ್ತುಶಿಲ್ಪಿ ಸಂಸ್ಥೆಯವರನ್ನು ಕಟ್ಟಡಗಳ ವಿವರಗಳ ಬಗ್ಗೆ ವಿವರಣೆ ನೀಡಲು ಆಹ್ವಾನಿಸಲಾಯಿತು. ಸದರಿಯವರು ವಿವರಗಳನ್ನು ಪ್ರಸ್ತುತಪಡಿಸಿದಾಗ ಸದಸ್ಯರುಗಳು ನೀರು ಸಂರಕ್ಷಣೆ, ಸೋಲಾರ್ ಇಂದನ, ಸಾಂಪ್ರದಾಯಿಕ ವಾಸ್ತುಶಿಲ್ಪ, ಚರಂಡಿ ನೀರು ಸಂಸ್ಕರಣ ಘಟಕ ಮುಂತಾದವುಗಳ ಬಗ್ಗೆ ವಿವರಣೆ ಬಯಸಿದರು ಹಾಗೂ ಹಾಲಿ ಇರುವ ಭೂಪ್ರದೇಶದ ನೈಜತೆಗೆ ಭಂಗ ಬರದಂತೆ ಕಟ್ಟಡಗಳ ನಕ್ಷೆಗಳನ್ನು ತಯಾರಿಸುವಂತೆ ಸಲಹೆ ನೀಡಿದರು.

ಕಾರ್ಯಸೂಚಿಯನ್ನು ಪರಿಗಣಿಸುವ ಮುನ್ನ ರಾಜ್ಯದಲ್ಲಿ ಈ ವಿಶ್ವವಿದ್ಯಾಲಯ ಸ್ಥಾಪನೆಗೆ ಶಿಫಾರಸು ಮಾಡಿ ವರದಿ ನೀಡಿದ ಶ್ರೀ ಎಸ್. ವಿ. ರಂಗನಾಥ್, ಭಾ.ಆ.ಸೇ. (ನಿವೃತ್ತ), ಮಾಜಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಅವರ ನೇತೃತ್ವದ ತಜ್ಞರ ಸಮಿತಿಗೆ ಕೃತಜ್ಞತೆ ಹಾಗೂ ಮೆಚ್ಚುಗೆ ವ್ಯಕ್ತಪಡಿಸಿ ದಾಖಲಿಸಲು ಕಾರ್ಯನಿರ್ವಾಹಕ ಪರಿಷತ್ತು ಒಮ್ಮತದಿಂದ ನಿರ್ಣಯ ಕೈಗೊಂಡಿತು.

ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

At the outset, the Vice Chancellor extended hearty welcome to the Members for the first meeting of the Executive Council and introduced each one of them to the Executive Council. He briefed the members about the genesis, developmental and academic activities of the University carried out hitherto from the date of establishment. He also brought to the notice of the Executive Council the priorities and challenges before the University in the matters of providing essential infrastructure, faculty recruitment, getting UGC 12(B) recognition, NAAC recognition and enter National Institutional Ranking Framework (NIRF) etc. He sought suggestions, cooperation and support of all the members to achieve the objectives of the University and for its overall growth and development.

The Registrar formally welcomed all the members and made a Power Point Presentation on the activities of the University.

The members shared their views and expressed their happiness and appreciations for the efforts and dedication of the Vice Chancellor, Registrar, Finance Officer, Honorary Professors, Guest Faculty and other officials of the University in laying a sound foundation to the University and initiating several activities in the University within a short period inspite of lacuna of staff and infrastructure. The members assured their cooperation in taking the University to greater heights.

Thereafter, M/s. Kembavi Architects, who are one of the Architects chosen for preparation of plans for construction of buildings in the new Campus for the University, was invited to make a presentation on the Master Plan and the other building plans for the University Campus. During the presentation, the Members sought certain clarifications on

Water conservation, provisions for solar energy, architectural heritage, STPs etc. and suggested to plan the structures without disturbing the landscape.

Before taking up the agenda, the Executive Council unanimously resolved to place on record its appreciation and thanks to the Expert Committee headed by Shri S.V. Ranganath, IAS (Retd.), former Chief Secretary, Government of Karnataka for its excellent report for recommending establishment of this University in the State of Karnataka, at Gadag.

Then the agenda was taken up for consideration.

**ವಿಷಯ ಸಂಖ್ಯೆ 1: ವಿಶ್ವವಿದ್ಯಾಲಯದ ಈವರೆಗಿನ ಕಾರ್ಯ ಚಟುವಟಿಕೆಗಳ ಬಗ್ಗೆ ವರದಿ.**

ವಿಶ್ವವಿದ್ಯಾಲಯದ ಪ್ರಾರಂಭದಿಂದ ಈವರೆಗಿನ ಕಾರ್ಯ ಚಟುವಟಿಕೆಗಳ ಬಗ್ಗೆ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ದಿನಾಂಕ 26 ಜುಲೈ 2016 ರಂದು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧಿನಿಯಮ, 2016 ರ ಮೂಲಕ ಸುಸ್ಥಿರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ವಿಷಯದಲ್ಲಿ ಬೋಧನೆ, ತರಬೇತಿ ಮತ್ತು ಸಂಶೋಧನೆಗಾಗಿ ಸ್ಥಾಪನೆಯಾಯಿತು. ಈ ಅಧಿನಿಯಮವು ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವಿಕೆ ಮತ್ತು ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳ ಅಧ್ಯಯನ ಮತ್ತು ಸಂಶೋದನೆ ಮಾಡುವುದರ ಮೂಲಕ ಗ್ರಾಮೀಣ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಉದ್ದೇಶ ಹೊಂದಿದೆ.

ಪ್ರಸ್ತುತ ವಿಶ್ವವಿದ್ಯಾಲಯವು ಗದಗದ ಐತಿಹಾಸಿಕ 'ರೈತ ಭವನ' ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರಿನ ಆನಂದರಾವ್ ವೃತ್ತದಲ್ಲಿರುವ ಗ್ರಾಮೀಣಾಭಿವೃದ್ಧಿ ಭವನದಲ್ಲಿ ಪ್ರಾದೇಶಿಕ ಕಛೇರಿಯನ್ನು ಹೊಂದಿದೆ. ಗದಗದಲ್ಲಿ ವಿಶ್ವವಿದ್ಯಾಲಯದ ಆವರಣವನ್ನು ನಿರ್ಮಾಣ ಮಾಡಲು ನಾಗಾವಿ ಗ್ರಾಮದ ಬಳಿ ಸುಮಾರು 353 ಎಕರೆಗಳಷ್ಟು ಜಮೀನನ್ನು ಸರ್ಕಾರ ಗುರ್ತಿಸಿದೆ/ ಮಂಜೂರು ಮಾಡಿದೆ. ಇದುವರೆಗೆ ಸುಮಾರು 335 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಉಳಿದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಕಟ್ಟಡ ನಿರ್ಮಾಣಕ್ಕೆ ವಿನ್ಯಾಸಗಳನ್ನು ತಯಾರಿಸಲು ಪಾರದರ್ಶಕ ನಿಯಮಗಳನುಸಾರ ಇಬ್ಬರು ವಾಸ್ತು ಶಿಲ್ಪಿಗಳನ್ನು ಆಯ್ಕೆ ಮಾಡಲಾಗಿದೆ. ನಿರ್ಮಾಣ ಕಾರ್ಯವನ್ನು ಹಂತಹಂತವಾಗಿ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ನಾಲ್ಕು ಕಟ್ಟಡಗಳ ಅಂದರೆ, ಸಾಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡ, ಒಂದು ಶಾಲಾ ಕಟ್ಟಡ, ಬಾಲಕರ ವಸತಿ ನಿಲಯ ಮತ್ತು ಊಟದ ಮನೆ ನಿರ್ಮಾಣ ಕಾರ್ಯ ಕಾರ್ಯಪ್ರಗತಿಯಲ್ಲಿದೆ ಹಾಗೂ ತರಬೇತಿ ಕೇಂದ್ರದ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ.

ವಿಶ್ವವಿದ್ಯಾಲಯವನ್ನು ದಿನಾಂಕ 02-03-2018 ರಂದು ಅಂದಿನ ಮಾನ್ಯ ಮುಖ್ಯ ಮಂತ್ರಿಗಳಿಂದ ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಇತರ ಗಣ್ಯ ವ್ಯಕ್ತಿಗಳ ಉಪಸ್ಥಿತಿಯಲ್ಲಿ ವಿಧ್ಯುಕ್ತವಾಗಿ ಉದ್ಘಾಟನೆ ಮಾಡಲಾಯಿತು.

**ವಿಶ್ವವಿದ್ಯಾಲಯದ ಪ್ರಮುಖ ಅಂಶಗಳು:**

1. ವಿಶ್ವವಿದ್ಯಾಲಯದ ಕೋರ್ಸುಗಳು ಅಂತರ್ ಶಿಸ್ತೀಯವಾಗಿದ್ದು, ಇತರೆ ಸಾಂಪ್ರಾದಾಯಿಕ ಸಂಸ್ಥೆಗಳು ನೀಡುವ ಶಿಕ್ಷಣಕ್ಕಿಂತ ಭಿನ್ನವಾಗಿದ್ದು ಕೇವಲ ಸೈದ್ಧಾಂತಿಕವಾಗಿರದೇ ಹೆಚ್ಚು ಪ್ರಾಯೋಗಿಕವಾಗಿರುತ್ತದೆ. ಈ ವಿಶ್ವವಿದ್ಯಾಲಯದಿಂದ ತರಬೇತಿ ಪಡೆದ ಪದವೀದರರು ಮತ್ತೆ ಬೇರೆ ಯಾವುದೇ ತರಬೇತಿಯ ಅವಶ್ಯಕತೆ ಇಲ್ಲದೇ ನೇರವಾಗಿ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು.
2. ಈ ವಿಶ್ವವಿದ್ಯಾಲಯದ ಪದವೀಧರರು / ಸ್ನಾತಕೋತ್ತರ ಪದವೀಧರರು ಮತ್ತು ತರಬೇತಿ ಪಡೆದವರು ಉದ್ಯೋಗದ ಹಲವಾರು ಅವಕಾಶಗಳಿಗೆ ಅರ್ಹರಾಗಿರುತ್ತಾರೆ. ಉದ್ಯಮ ಶೀಲತಾ ಅಭಿವೃದ್ಧಿ ತರಬೇತಿಯೊಂದಿಗೆ ಸಹಕಾರಿ ಸಂಸ್ಥೆಗಳು, ಕೃಷಿ ಸಂಬಂಧಿ ಮತ್ತು ಸರ್ಕಾರೇತರ ಉದ್ದಿಮೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಉದ್ಯೋಗಕ್ಕೆ ಅರ್ಹರಾಗುತ್ತಾರೆ. ಅಲ್ಲದೇ ಸ್ವಯಂ ಉದ್ಯೋಗಿಗಳಾಗಲು ತಯಾರಾಗುತ್ತಾರೆ.

3. ಕಳೆದು ಹೋಗುತ್ತಿರುವ ಸಂಪ್ರಾದಾಯಿಕತೆ, ನೈಸರ್ಗಿಕತೆಯನ್ನು ಕಾಪಾಡುವುದು, ಗಾಂಧೀಜಿ ಕಂಡ ಗ್ರಾಮ ಸ್ವರಾಜ್ ಕಲ್ಪನೆಯನ್ನು ಸಾಕಾರಗೊಳಸುವುದು ಹಾಗೂ ಸ್ವಾಭಿಮಾನಿ, ಸ್ವಾಯತ್ತ ಗ್ರಾಮಗಳನ್ನು ನಿರ್ಮಿಸುವುದು.

**ಪ್ರಸ್ತುತ ವಿಶ್ವವಿದ್ಯಾಲಯ ಎರಡು ಕೇಂದ್ರಗಳನ್ನು ಹಾಗೂ ಐದು ಅಧ್ಯಯನ ಶಾಲೆಗಳನ್ನು ಹೊಂದಿದೆ.**

**ಎರಡು ಕೇಂದ್ರಗಳು**

1. ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರ.
2. ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣಾ ಕೇಂದ್ರ.

**ಐದು ಶಾಲೆಗಳು**

1. ಕೃಷಿ ವ್ಯವಹಾರ ವ್ಯವಸ್ಥಾಪನೆ ಮತ್ತು ಗ್ರಾಮೀಣಾಭಿವೃದ್ಧಿ ವ್ಯವಸ್ಥಾಪನಾ ಶಾಲೆ,
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಶಾಲೆ,
3. ಪರಿಸರ ವಿಜ್ಞಾನ, ಸಾರ್ವಜನಿಕ ಆರೋಗ್ಯ ಹಾಗೂ ನೈರ್ಮಲ್ಯ ವ್ಯವಸ್ಥಾಪನಾ ಶಾಲೆ,
4. ಸಾಮಾಜಿಕ ವಿಜ್ಞಾನ ಮತ್ತು ಗ್ರಾಮೀಣ ಪುನಾರಚನಾ ಶಾಲೆ,
5. ಕೌಶಲ್ಯ ಮತ್ತು ಉದ್ಯಮಶೀಲತಾ ಅಭಿವೃದ್ಧಿ ಶಾಲೆ

ಈ ಕೇಂದ್ರಗಳು ಮತ್ತು ಶಾಲೆಗಳು ತಮ್ಮ ಕಾರ್ಯವ್ಯಾಪ್ತಿಯ ಬೋಧನೆ, ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ನಿರ್ವಹಿಸುತ್ತವೆ.

**ವಿಶ್ವವಿದ್ಯಾಲಯ 2017-18ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ಐದು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಮೂಲಕ ಕಾರ್ಯಾರಂಭ ಮಾಡಿತು.**

1) ಎಂ.ಎ. - ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್
2) ಎಂ.ಎಸ್.ಡಬ್ಲ್ಯೂ. - ಸಮುದಾಯದ ಅಭಿವೃದ್ಧಿ/ ಸಮುದಾಯ ಆರೋಗ್ಯ
3) ಎಂ.ಎಸ್ಸಿ. -ಜಿಯೊಇನ್ಫರ್‌ಮೆಟಿಕ್ಸ್
4) ಎಂ.ಬಿ.ಎ. -ಗ್ರಾಮೀಣ ನಿರ್ವಹಣೆ/ಕೃಷಿ ವ್ಯವಹಾರ ನಿರ್ವಹಣೆ.
5) ಎಂ.ಕಾಂ. - ಉದ್ಯಮ ಶೀಲತೆ/ ಸಹಕಾರಿ ನಿರ್ವಹಣೆ.

**2018-19ನೇ ಸಾಲಿನಿಂದ ಈ ಕೆಳಕಂಡ ಎರಡು ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲಾಯಿತು.**

1) ಎಂ.ಎಸ್ಸಿ. -ಫುಡ್ ಸೈನ್ಸ್ ಅಂಡ್ ಟೆಕ್ನಾಲಜಿ
2) ಎಂ.ಪಿ.ಎಚ್. ಸಾರ್ವಜನಿಕ ಆರೋಗ್ಯ

ಪ್ರಸ್ತುತ 300 ವಿದ್ಯಾರ್ಥಿಗಳು, 35 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡು, ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಮುಂಬರುವ ವರ್ಷಗಳಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ ಕೋರ್ಸುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಿಬ್ಬಂದಿಗೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರಿಗೆ ತರಬೇತಿ ನೀಡಲು ಒತ್ತು ಕೊಡಲಾಗುವುದು. ಈ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ತರಬೇತಿ ಕೇಂದ್ರ ಮತ್ತು ಸಿಬ್ಬಂದಿ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

**ಬೋಧಕವರ್ಗ ಮತ್ತು ಸಿಬ್ಬಂದಿ:**

ರಾಜ್ಯ ಸರ್ಕಾರ ದಿನಾಂಕ 11-05-2017 ಮತ್ತು 21-06-2017ರ ಆದೇಶಗಳಲ್ಲಿ ವಿಶ್ವವಿದ್ಯಾಲಯಕ್ಕೆ ಒಟ್ಟು 172 ಹುದ್ದೆಗಳನ್ನು (ಬೋಧಕರು, ಸಂಶೋದನಾ, ಬೋದಕೇತರರು ಮತ್ತು ತಾಂತ್ರಿಕ ಸಿಬ್ಬಂದಿ) ಸೃಜಿಸಿ ಆದೇಶ ಹೊರಡಿಸಿದೆ. ಈ ಹುದ್ದೆಗಳಿಗೆ ಇನ್ನೂ ನೇಮಕಾತಿ ಮಾಡಬೇಕಾಗಿದೆ. ಪ್ರಾರಂಭದಲ್ಲಿ ವಿಶ್ವವಿದ್ಯಾಲಯವು ತಾತ್ಕಾಲಿಕವಾಗಿ ಹಿರಿಯ ಹಾಗೂ ಆಯಾ ಕ್ಷೇತ್ರಗಳಲ್ಲಿ ಧೀರ್ಘಕಾಲ ಸೇವೆ ಸಲ್ಲಿಸಿ ಖ್ಯಾತಿಗಳಿಸಿರುವ ಬೋಧಕರನ್ನು ಗೌರವ/ಸಂದರ್ಶಕ/ಅತಿಥಿ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿಕೊಂಡಿದೆ. ಅವಶ್ಯಕವಾದ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಬೋಧಕರನ್ನು ನೇಮಕ ಮಾಡಲಾಗಿದೆ. ಇವರುಗಳು ವಿದ್ಯಾರ್ಥಿಗಳಿಗೆ, ಸೂಕ್ತ ಸಲಹೆ ಮಾರ್ಗದರ್ಶನಗಳನ್ನು ನೀಡಿ ಹುರಿದುಂಬಿಸುತ್ತಿದ್ದಾರೆ. ಮುಂದುವರೆದು, ಪ್ರೊ. ಎನ್. ಶಿವಣ್ಣ (ನಿವೃತ್ತ ಪ್ರಾಧ್ಯಾಪಕರು, ISEC), ಗೌರವ ಪ್ರಾಧ್ಯಾಪಕರು, ಇವರನ್ನು ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರದ ಪ್ರಭಾರ ನಿರ್ದೇಶಕರರನ್ನಾಗಿ ನಿಯುಕ್ತಗೊಳಸಲಾಗಿದೆ ಹಾಗೂ ಕುಲಸಚಿವರಿಗೆ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ನಿರ್ದೇಶಕರ ಪ್ರಭಾರವನ್ನು ವಹಿಸಲಾಗಿದೆ.

B. Thimmegowda

**ಶೈಕ್ಷಣಿಕ ಮತ್ತು ಇತರೆ ಚಟುವಟಿಕೆಗಳು**

ವಿಶ್ವವಿದ್ಯಾಲಯ ಹಲವಾರು ತಜ್ಞರ ಸಮಿತಿಗಳನ್ನು ರಚಿಸಿ, ಸಭೆಗಳನ್ನು ನಡೆಸಿ ದೇಶದ ಪ್ರತಿಷ್ಠಿತ ಸಂಸ್ಥೆಗಳ/ ವಿಶ್ವವಿದ್ಯಾಲಯಗಳ, ಉದ್ಯಮದಾರರು, ಸಾಮಾಜಿಕ ವಲಯದ ಕ್ಷೇತ್ರ ತಜ್ಞರನ್ನು ಆಹ್ವಾನಿಸಿ ವಿವಿಧ ಕೋರ್ಸ್‌ಗಳ ಪಠ್ಯಕ್ರಮಗಳನ್ನು ತಯಾರಿಸಿದೆ. ಶೈಕ್ಷಣಿಕ ಚಟುವಟಿಕೆಗಳೊಂದಿಗೆ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಗೆ ಸಂಬಂಧಪಟ್ಟ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಆಂಗ್ಲ ಭಾಷಾ ಪ್ರಾಂತೀಯ ಸಂಸ್ಥೆ, ದಕ್ಷಿಣ ಭಾರತ, ಬೆಂಗಳೂರು ಇವರ ಸಹಯೋಗದಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹಮ್ಮಿಕೊಳ್ಳಲಾಗುತ್ತಿರುವ ಸಂವಹನ ಕೌಶಲ್ಯ ಕಾರ್ಯಕ್ರಮ ಅವುಗಳಲ್ಲೊಂದಾಗಿದೆ. ಇದರೊಂದಿಗೆ ನಿಯಮಿತವಾಗಿ ರಾಷ್ಟ್ರ ಮಟ್ಟದ ವಿಚಾರ ಗೋಷ್ಠಿಗಳು ಹಾಗೂ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ "ಸ್ವಚ್ಛ ಭಾರತ ಅಭಿಯಾನ"ದಲ್ಲಿ ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಅಭಿಯಾನವನ್ನು ಯಶಸ್ವಿಗೊಳಿಸಲು ಕೈಜೋಡಿಸಿದ್ದಾರೆ.

ವಿಶ್ವವಿದ್ಯಾಲಯವು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಗದಗ ತಾಲ್ಲೂಕಿನ ಕಳಸಾಪುರ, ನಾಗಾವಿ, ಹುಲಕೋಟಿ, ಬಿಂಕದಕಟ್ಟಿ ಹಾಗೂ ಕುರ್ತಕೋಟಿ ಹೀಗೆ ಐದು ಗ್ರಾಮಗಳನ್ನು ದತ್ತು ತೆಗೆದುಕೊಂಡು, ಕಾರ್ಯ ಪ್ರವೃತ್ತವಾಗಿದೆ. ದತ್ತು ಪಡೆದುಕೊಂಡ ಗ್ರಾಮಗಳಲ್ಲಿ ಕಾರ್ಯನಿರ್ವಹಿಸಲು ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಮೂರು ದಿನಗಳ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಯಿಂದ ಕೈಗೊಳ್ಳುವ ಚಟುವಟಿಕೆಗಳು, ಲಭ್ಯವಿರುವ ಸೌಲಭ್ಯಗಳನ್ನು ಕುರಿತು ಸವಿಸ್ತಾರವಾಗಿ ಮಾಹಿತಿಯನ್ನು ನೀಡಿದರು. ದತ್ತು ಗ್ರಾಮಗಳ ಕ್ಷೇತ್ರ ಭೇಟಿಯ ಸಮಯದಲ್ಲಿ ಸಾರ್ವಜನಿಕ ಆರೋಗ್ಯ ಭಾಗವಾಗಿ ಮಹಿಳೆ ಮತ್ತು ಮಕ್ಕಳ ಆರೋಗ್ಯದ ಕುರಿತು, ಸಾಂಸ್ಥಿಕ ವ್ಯವಸ್ಥೆಯ ಕುರಿತು, ವೈಯಕ್ತಿಕ ಸ್ವಚ್ಛತೆ, ಶೌಚಾಲಯ ಬಳಕೆಯ ಮಹತ್ವ ಮತ್ತು ಬಯಲು ಶೌಚದ ದುಷ್ಪರಿಣಾಮಗಳು, ಪೋಷಣೆ, ಗ್ರಾಮೀಣ ಪ್ರವಾಸೋದ್ಯಮಕ್ಕೆ ಉತ್ತೇಜನೆ, ಗ್ರಾಮೀಣ ಮಾರುಕಟ್ಟೆ ವ್ಯವಸ್ಥೆ, ಶಿಕ್ಷಣ, ವಯೋವೃದ್ಧರಿಗೆ ಮತ್ತು ಅಂಗವಿಕಲರಿಗೆ ಪೆನ್ಷನ್ (ಮಾಸಾಶನ) ಒದಗಿಸುವುದು, ಸಂಪನ್ಮೂಲಗಳ ಮ್ಯಾಪಿಂಗ್, ಬ್ಯಾಂಕ್ ಖಾತೆಗಳನ್ನು ತೆಗೆಯುವದರ ಮಹತ್ವ, ಗ್ರಾಮೀಣ ಉದ್ಯೋಗಗಳು ಮತ್ತು ದೈನಂದಿನ ಆರೋಗ್ಯದ ಮೇಲೆ ಆಹಾರ-ವಿಹಾರದ ಪ್ರಭಾವದ ಕುರಿತು ವಿವಿಧ ವಯೋಮಾನದ ಜನರ ಜೊತೆಗೆ ಗುಂಪು ಚರ್ಚೆಗಳ ಮೂಲಕ ಮತ್ತು ಸಾರ್ವಜನಿಕ ಸಭೆಗಳನ್ನು ಆಯೋಜಿಸಿ, ಪರಿಸ್ಥಿತಿಯನ್ನು ಅವಲೋಕಿಸುವ, ಪರಿಹಾರಗಳನ್ನು ಹುಡುಕುವ ಕುರಿತು ಗ್ರಾಮೀಣ ಜನರಿಗೆ ತಿಳುವಳಿಕೆಯನ್ನು ನೀಡಲಾಯಿತು.

**ಕಾರ್ಯಗಾರಗಳು/ ತರಬೇತಿ ಕಾರ್ಯಕ್ರಮಗಳು/ ವಿಚಾರ ಸಂಕಿರಣಗಳು**

ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹಲವಾರು ಕಾರ್ಯಾಗಾರಗಳನ್ನು, ವಿಚಾರ ಸಂಕಿರಣಗಳನ್ನು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅವುಗಳೆಂದರೆ, ಇಸ್ರೋ ಅವರ Outreach ಕಾರ್ಯಕ್ರಮ, ಇಂಡಿಯನ್ ಇನ್ಸಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್ ಅವರ EDUSAT, ಸಾಫ್ಟ್‌ವೇರ್ ತರಬೇತಿ, ಹ್ಯಾಂಡ್ಸ್ ಆನ್ ತರಬೇತಿ ಮುಂತಾದವು.

ದಿನಾಂಕ 13-14 ಜೂನ್, 2018 ರಂದು "Dynamics of Rural Development and Panchayat Raj Institutions" ಎಂಬ ವಿಷಯದ ಬಗ್ಗೆ 2-ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ದಿನಾಂಕ 5-6 ಅಕ್ಟೋಬರ್, 2018 ರಂದು "Water, Sanitation and Hygiene: Approaches and Methods" ಎಂಬ ವಿಷಯದಲ್ಲಿ ಎರಡು ದಿನಗಳ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ದಿನಾಂಕ 23-10-2018 ರಂದು ಶಿಕ್ಷಣ ಮತ್ತು ಸಮಾಜ ಶಾಸ್ತ್ರ ಕೇಂದ್ರ (CESS), ಬೆಂಗಳೂರು ಅವರ ಸಹಯೋಗದಲ್ಲಿ "Gandhian Thoughts and Philosophy" ಎಂಬ ವಿಷಯದ ಬಗ್ಗೆ ಒಂದು ದಿನದ ವಿಚಾರ ಗೋಷ್ಠಿಯನ್ನು ನಡೆಸಲಾಯಿತು.

ಕಸ್ತೂರಿಬಾ ಮತ್ತು ಮಹಾತ್ಮಾ ಗಾಂಧಿಯವರ 150ನೇ ಜಯಂತಿಯ ಅಂಗವಾಗಿ ದಿನಾಂಕ 30-31 ಮೇ ಹಾಗೂ 1ನೇ ಜೂನ್ 2019 ರಂದು **"The UN Sustainable Development Goals, Ba-Bapu and Civil Society"** ಎಂಬ ಶೀರ್ಷಿಕೆಯ 3-ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ನಡೆಸಲು ಆಯೋಜಿಸಲಾಗಿದೆ.

**ಸೌಲಭ್ಯಗಳು**

- ಬಾಲಕ ಹಾಗೂ ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇ-ಸಂಪನ್ಮೂಲಗಳು
- ಇಂಟರ್‌ನೆಟ್ ಸೌಲಭ್ಯ ಹೊಂದಿರುವ ಕಂಪ್ಯೂಟರ್ ಲ್ಯಾಬ್
- ಕ್ಯಾಂಪಸ್‌ನಲ್ಲಿ ವೈ-ಫೈ ಸೌಲಭ್ಯ
- ಸಂವಹನ ಕೌಶಲ್ಯ ಅಭಿವೃದ್ಧಿ ತರಬೇತಿ
- ಕಂಪ್ಯೂಟರ್ ಅಪ್ಲಿಕೇಷನ್ಸ್ ತರಬೇತಿ
- ಇಂಟರ್ನ್‌ಶಿಪ್ ಹಾಗೂ ಪ್ರೊಜೆಕ್ಟ್‌ಗಳು
- ಸೆಮಿನಾರ್‌ಗಳು ಹಾಗೂ ಕಾನ್ಫರೆನ್ಸ್‌ಗಳು
- ವಿಷಯ ತಜ್ಞರು ಹಾಗೂ ವೃತ್ತಿಪರರಿಂದ ವಿಶೇಷ ಉಪನ್ಯಾಸಗಳು
- ಪಠ್ಯೇತರ ಚಟುವಟಿಕೆಗಳು
- ಪ್ರಾಯೋಗಿಕ/ಕ್ಷೇತ್ರಕಾರ್ಯ ಹೊಂದಿದ ತರಬೇತಿ

ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿಧ ಘಟಕಗಳನ್ನು - ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಘಟಕ, ಮಹಿಳೆಯರ ಕುಂದು ಕೊರತೆ ನಿವಾರಣಾ ಘಟಕ, ಉದ್ಯೋಗ ಸಲಹಾ ಘಟಕ ಮುಂತಾದವುಗಳನ್ನು ಸ್ಥಾಪಿಸಿದೆ.

UNICEF ಕ್ಷೇತ್ರ ಕಛೇರಿ, ಹೈದರಾಬಾದ್ ಇವರ ಸಹಯೋಗದೊಂದಿಗೆ UNICEF ಸಂಸ್ಥೆಯ ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಇನ್ನಿತರ ಯೋಜನೆಗಳನ್ನು ಜಾರಿಗೊಳಿಸಲು "Child Rights and Governance Cell" ನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆ. ಈ ಘಟಕದ ಮೂಲಕ ದಿನಾಂಕ 10-04-2019 ರಂದು ಅಧ್ಯಾಪಕರುಗಳಿಗಾಗಿ "ಸ್ಥಳೀಯ ಸ್ವಯಂ ಸರ್ಕಾರ ಮತ್ತು ಮಕ್ಕಳ ಹಕ್ಕುಗಳ ಒಡಂಬಡಿಕೆ" ಕುರಿತು ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು.

ವಿಶ್ವವಿದ್ಯಾಲಯವು ರಾಜ್ಯದ 1500 ಗ್ರಾಮಗಳಿಂದ 'Smart Village' ಗಳನ್ನು ಗುರುತಿಸಲು ರಾಜ್ಯ ಸರ್ಕಾರ, Quality Council of India, New Delhi and Foundation for Quality India, ಬೆಂಗಳೂರಿನೊಂದಿಗೆ ಕೈ ಜೋಡಿಸಿದೆ. ಹಲವಾರು ಸೂಚ್ಯಾಂಕಗಳ ಸಹಾಯದಿಂದ ಸಮೀಕ್ಷೆಯನ್ನು ಮಾಡಿ 'Smart Villages' ಗಳನ್ನು ಗುರುತಿಸಲಾಗುವುದು ಹಾಗೂ ಅಕ್ಟೋಬರ್ 2, 2019 ರಂದು ಇವುಗಳನ್ನು 'Smart Villages' ಗಳೆಂದು ಘೋಷಿಸಲಾಗುವುದು.

**ಪರೀಕ್ಷೆಗಳು ಮತ್ತು ಫಲಿತಾಂಶ**

ವಿಶ್ವವಿದ್ಯಾಲಯ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಮೊದಲನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಿದೆ. 122 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡು 117 ಜನ ಉತ್ತೀರ್ಣರಾಗಿದ್ದಾರೆ. ಫಲಿತಾಂಶ ಶೇಕಡ 96 ರಷ್ಟಿದೆ ಹಾಗೂ ಎರಡನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ 117 ವಿದ್ಯಾರ್ಥಿಗಳು ಪರೀಕ್ಷೆ ಬರೆದು 114 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ. 97.4 ರಷ್ಟು ಫಲಿತಾಂಶ ಬಂದಿದೆ.

ವಿಶ್ವವಿದ್ಯಾಲಯ ಶೈಕ್ಷಣಿಕ ವರ್ಷ 2018-19ರಲ್ಲಿ, ಮೊದಲನೇ ಸೆಮಿಸ್ಟರ್ (FS&T ಹೊರತುಪಡಿಸಿ) ಪರೀಕ್ಷೆಗಳನ್ನು ನಡೆಸಿದೆ. ಪರೀಕ್ಷೆಯಲ್ಲಿ 130 ವಿದ್ಯಾರ್ಥಿಗಳು ಹಾಜರಿದ್ದು, 127 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಫಲಿತಾಂಶ ಶೇಕಡ 97.7 ರಷ್ಟಿದೆ ಹಾಗೂ ಮೂರನೇ ಸೆಮಿಸ್ಟರ್‌ನ ಪರೀಕ್ಷೆಯಲ್ಲಿ 112 ವಿದ್ಯಾರ್ಥಿಗಳು ಹಾಜರಿದ್ದು, 108 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇಕಡ. 96.4 ರಷ್ಟು ಫಲಿತಾಂಶ ಬಂದಿದೆ.

**ವಿನಿಮಯ/ ಪರ್ಯಾದೇಶಗಳ ಅನುಮೋದನೆ**

ಕುಲಾಧಿಪತಿಗಳ ಮತ್ತು ಸರ್ಕಾರದ ಪೂರ್ವಾನುಮತಿ ಪಡೆದ ಪ್ರಕರಣ ೮೫ ಮತ್ತು ೮೬ ರಡಿ ಪ್ರಥಮ ಕುಲಪತಿಗಳು ಈ ಕೆಳಕಂಡ ವಿನಿಮಯಗಳನ್ನು/ ಪರ್ಯಾದೇಶಗಳನ್ನು ರಚಿಸಿ ಕುಲಾಧಿಪತಿಗಳಿಂದ ಅನುಮೋದನೆಗೊಂಡಿವೆ:

1. The Karnataka State Rural Development and Panchayat Raj University Board of Studies Regulations, 2017
2. The Karnataka State Rural Development and Panchayat Raj University Works Committee Regulations, 2017
3. The Karnataka State Rural Development and Panchayat Raj University Appointment of Honorary Professors, Emeritus Professors, Visiting Professors, Teaching Assistants, Research and Project Fellows Regulations, 2017
4. The Karnataka State Rural Development and Panchayat Raj University Conditions of Service and Conduct of the Employees of the University Regulations, 2017
5. The Karnataka State Rural Development and Panchayat Raj University Payment of Allowances, Sitting Fees etc, to the Members of the Authorities, Officers, Members of Various Committees and others Regulations, 2017
6. The Karnataka State Rural Development and Panchayat Raj University Powers and Functions of the Finance Officer Regulations, 2017
7. The Karnataka State Rural Development and Panchayat Raj University Powers and Functions of Librarian Regulations, 2017
8. The Karnataka State Rural Development and Panchayat Raj University Finance Committee Business Regulations, 2017
9. The Karnataka State Rural Development and Panchayat Raj University Temporary Appointments to the Posts of Assistant Professors and Non-teaching Staff Regulations, 2017
10. The Karnataka State Rural Development and Panchayat Raj University Constitution, Powers and Functions of Purchase Committee Regulations, 2017
11. The Karnataka State Rural Development and Panchayat Raj University Delegation of Financial Powers to the Vice Chancellor, the Registrar, the Finance Officer, the Directors of Centers, the Heads of Schools, the Librarian and the Director of Physical Education Regulations, 2017
12. The Karnataka State Rural Development and Panchayat Raj University Terms and conditions of Service of the Registrar Regulations, 2017
13. The Karnataka State Rural Development and Panchayat Raj University Executive Council Business Regulations, 2017

14. The Karnataka State Rural Development and Panchayat Raj University Academic Council Business Regulations, 2017

15. The Karnataka State Rural Development and Panchayat Raj University Faculty Council Regulations, 2017

16. The Karnataka State Rural Development and Panchayat Raj University Procedure for Meetings of the Centre of Research, Innovation and Evaluation, Centre for Training, Publication and Supervision and other Schools of Studies Regulations, 2017

17. The Karnataka State Rural Development and Panchayath Raj University Financial Estimates Regulations, 2018

18. The Karnataka State Rural Development and Panchayath Raj University Annual Report Regulations, 2018

19. The Karnataka State Rural Development and Panchayath Raj University Examination Ordinance, 2018

20. The Ordinances Governing the Choice Based Credit System for Two Years (Four Semesters) Masters Degree Programmes in the various Schools of the Karnataka State Rural Development and Panchayat Raj University, Gadag, 2017-18

ಮೇಲಿನ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ.

**Brief Report on the activities of the University.**

The Karnataka State Rural Development and Panchayat Raj University was established through the Act called "The Karnataka State Rural Development and Panchayat Raj University Act, 2016" published in Karnataka Gazette dated 26th July 2016, for teaching, training and research on Sustainable Rural Development and Panchayat Raj Institutions. This Act was enacted with an intention to strengthen the local self-governance system and to give impetus for the study and research for a comprehensive rural development in the State of Karnataka.

At present the University is housed in a historic Raitha Bhavan building at Gadag and has a Regional Office at Grameenabhivruddhi Bhavan, Ananda Rao Circle, Bengaluru. The State Government has sanctioned / identified about 350 acres of land near Nagavi village, Gadag, for the construction of new Campus for the University. So far around 215 acres of land has been acquired/procured for the purpose and the process of acquiring the remaining land is under progress. The University has empanelled two reputed Architects through e-tender process for designing the Campus buildings and the construction of buildings is taken up in a phased manner. **At present construction of four buildings, Viz., Replica of Sabarmati Ashram, One School Building (SB-1), One Boys Hostel, Dining Hall are under progress and Tenders have been floated for construction of a Training Centre.**

The University was formally inaugurated and foundation stone for construction of New Campus was laid on 2nd March 2018 by the then Hon'ble Chief

Minister of Karnataka and the then Hon'ble RDPR Minister, in the august presence of many other dignitaries.

**The Salient Features of the University**

1. The unique feature of this university is that the courses being offered in the university are of interdisciplinary nature and are practical oriented than mere theoretical, unlike those offered in conventional universities. The products of this university will be ready to service the society without any additional training requirement.

2. The graduates and post-graduates of the university will have ample employment opportunities in co-operative institutions, agro-based industries both public and private sector, Rural Development and Panchayat Raj Department. The training and education they get will also make them self-employable through entrepreneurial programs. The university has at present two centers of learning and five schools of study.
3. To uphold the culture and heritage of villages which are losing their traces to achieve Gandhiji dream of Gram Swaraj and to establish self esteemed autonomous villages.

**The University has at present two Centres and five Schools of Study**

**Two Centres of the University are -**
1. Centre of Research, Innovation and Evaluation
2. Centre for Training, Publications & Supervision

**Five Schools of Study of the University are -**
1. School of Agribusiness Management and Management of Rural Development.
2. School of Rural Development and Panchayat Raj.
3. School of Environmental Science, Public Health and Sanitation Management.
4. School of Social Science and Rural Reconstruction.
5. School of Skill and Entrepreneurship Development.

The said Centres and Schools will discharge their teaching, training, research and extension activities.

**Courses:**

The University started functioning from the academic year 2017-18 with five Postgraduate courses Viz., -
1. M.B.A (Rural Management / Agri-business Management / Enterprise Management),
2. M.A.(Rural Development and Panchayat Raj / Rural Development and Cooperative Management),
3. M.Sc., Geoinformatics,
4. M.S.W. (Community Development / Rural Reconstruction), and
5. M.Com (Entrepreneurship / Cooperative Management).

During the academic year 2018-19 two more Postgraduate Courses have been started, Viz.,
1. M.P.H. (Master of Public Health) and
2. M.Sc. in Food Science and Technology.

At present 300 students including about 35 Panchayat Development Officers (PDOs) are studying in the University. The University is planning to start various Certificate, Diploma and Postgraduate Diploma Courses. Stress will be on providing training to Rural Development and Panchayat Raj Department staff and Panchayat Raj system members. To fulfil this objective, a separate Training Centre and Staff Development Centre are being established.

**FACULTY AND STAFF**

The State Government vide Orders dated 11-05-2017 and 21-06-2017 have created totally 172 posts (Teaching, Research, Non-teaching and technical) to the University. Recruitments to these posts are yet to be made. To begin with, the University has appointed senior Faculty as Honorary Professors / Visiting Professors / Guest Faculty. These Faculty members have earned reputation / distinction in their fields of specializations through long years of dedicated service. They are orientating, motivating and counselling our students mostly from rural areas. Adequate number of full and part-time Guest Faculty have also been appointed. Further, in-charge arrangements for the two posts of Directors of Centres have been made. Prof. N. Sivanna, (Retired Professor of ISEC), Honorary Professor of the University has been made in-charge of Director, Research, Innovation and Evaluation, and the Registrar of the University is placed in-charge of the Director of Training, Publication and Supervision of all Schools.

**ACADEMIC AND OTHER ACTIVITIES**

The University constituted various Expert Committees and conducted meetings with the participation of experts from the reputed institutes / universities, industrialists, field experts from social sector etc. from all over the country to design and draft the Course contents of the Postgraduate courses offered in the University.

Along with academics, the University is also stressing on the personality development of its students and has initiated various measures in this regard. Every year, the University conducts English Communications Skills Development programme in collaboration with the RIESI, Bengaluru. Besides, the University also conducts National Level conferences and workshops regularly. The students of the University have actively participated in the Government's flagship Programme Swachch Bharat Abhiyan and contributed to the success of the programme.

The University has initiated its activities, for the holistic development of villages, by adopting five villages, namely, Binkadakatti, Hulkoti, Kalasapur, Kurtkoti and Nagavi from the Gadag district. Three days Orientation Programme was organised for the students to prepare them for the Village adoption programme. Many district level officers of various Government Departments addressed the students pertaining to the schemes, guidelines and the activities which can be taken up during the students visit to the adopted villages. During the field visits to these villages, awareness generation activities about Mother and Child health, Personal hygiene, nutrition, benefits of usage of toilets, harmful effects of open defecation, advantages of bank account, resource mapping, promotion of rural tourism and rural marketing, education and pension schemes for elderly and differently abled people were conducted. Public meetings were organised to contemplate about these situations and to find possible solutions.

**WORKSHOPS / TRAINING PROGRAMMES / CONFERENCES**

The University has organized several Workshops/Conferences and various Training programmes like, EDUSAT of Indian Institute of Remote Sensing (IIRS), ISRO Outreach program, Software Training programme/Hands on Training programme etc. for the benefit of students and teachers.

A two-day National Conference on *"Dynamics of Rural Development and Panchayat Raj Institutions"* was organized on 13th and 14th June 2018.

A two-day State level Thematic Workshop on *"Water, Sanitation and Hygiene: Approaches and Methods"* was organized on 5th and 6th October 2018.

One day Seminar on *"Gandhian Thoughts and Philosophy"* was organized on 23rd October 2018 in association with Centre for Education and Social Studies (CESS), Bengaluru.

**The University is proposing to organize a National Seminar to commemorate Ba-Bapu Sesquicentennial (150th) Birth Anniversary, *entitled "The UN Sustainable Development Goals, Ba-Bapu and Civil Society",* on 30th, 31st May and 1st June 2019.**

**FACILITIES**

- Separate Hostels with Boarding Facilities For Boys And Girls.
- Well Equipped Library with E-Resources.
- Computer Lab with Internet.
- Wi-Fi Facilities in the Campus.
- Communication Skills Development Training.
- Computer Applications Training.
- Internship Programs and Project Works.
- Seminars and Conferences.
- Special Lectures by Eminent Faculty and Professionals.
- Extra-Curricular Activities.
- Practical / Field Oriented Training.

The University has set up different Cells like, SC/ST Cell, Women's Grievance Cell, Placement Cell etc, to provide the benefits of Government Schemes and facilities to the students.

In collaboration with UNICEF Field Office, Hyderabad, a **"Child Rights and Governance Cell"** has been established in order to implement the objectives of UNICEF relating to protection of child rights and other schemes. Through this Cell, a one-day Workshop for Teachers on "Local-self Government and Child Rights" was organized on 10th April, 2019 in the University.

The University has made collaboration with the State Government, Quality Council of India, New Delhi and Foundation for Quality India, Bengaluru to identify "Smart Village" among the 1500 villages throughout the Karnataka State. The Smart Villages will be identified by conducting a survey using various parameters of Smart Villages and will be declared as smart villages on 2nd October 2019.

**EXAMINATION & RESULTS**

During the last academic year, the University has conducted First Semester examinations, wherein 122 students have appeared, out of which 117 students have passed achieving 96 % of results. In the Second Semester examinations, 117 students have appeared, out of which 114 have passed achieving 97.4% of results.

During the academic year 2018-19, the University has conducted First Semester examinations, wherein 130 students have appeared (excluding FS&T), out of which 127 students have passed achieving 97.7 % of results. In the Third

Semester examinations, 112 students have appeared, out of which 108 have passed achieving 96.4% of results.

**APPROVAL OF REGULATIONS / ORDINANCES**:

With the prior permission of the Chancellor and the State Government the first Vice Chancellor has framed the following Regulations and Ordinances under Section 85 and 86 of the Act and the same have been assented/approved by the Chancellor and the State Government **(Listed in Kannada version).**

This report is placed before the Executive Council for kind information.

*ನಿರ್ಣಯ:*

**ಕಾರ್ಯನಿರ್ವಾಹಕ ಪರಿಷತ್ತು ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳನ್ನು ಗಮನಿಸಿ ಅಧಿಕಾರಿ ವರ್ಗಕ್ಕೆ ಮತ್ತು ಬೋಧಕ ವರ್ಗದ ಕೊಡುಗೆಗಳಿಗೆ ಸಂತೋಷ ಹಾಗೂ ಮೆಚ್ಚುಗೆ ವ್ಯಕ್ತಪಡಿಸಿತು.**

***RESOLUTION:***

**The Executive Council noted the activities of the University, expressed their happiness and appreciated the University Officers, Faculty and other officials for their contributions.**

**ವಿಷಯ ಸಂಖ್ಯೆ 2: To consider the following draft Regulations -**

I. REGULATIONS GOVERNING THE APPOINTMENT AND PROMOTION OF TEACHERS AND OTHER ACADEMIC STAFF IN THE KARNATAKA STATE RURAL DEVELOPMENT AND PANCHAYAT RAJ UNIVERSITY, GADAG AND ITS REGIONAL CENTRES, 2019, AS PER THE UGC REGULATIONS OF 2018.

II. REGULATIONS RELATING TO MANNER OF CONDUCTING INTERVIEW FOR APPOINTMENT OF TEACHERS AND OTHER ACADEMIC STAFF IN THE KARNATAKA STATE RURAL DEVELOPMENT AND PANCHAYAT RAJ UNIVERSITY, GADAG AND ITS REGIONAL CENTRES, 2019, AS PER THE UGC REGULATIONS OF 2018.

III. REGULATIONS GOVERNING CADRE, RECRUITMENT AND PROMOTION OF NON-TEACHING, TECHNICAL AND MINISTERIAL STAFF IN THE KARNATAKA STATE RURAL DEVELOPMENT AND PANCHAYAT RAJ UNIVERSITY, 2019.

IV. THE KARNATAKA STATE RURAL DEVELOPMENT AND PANCHAYAT RAJ UNIVERSITY APPOINTMENT, POWERS, FUNCTIONS AND CONDITIONS OF SERVICE OF THE DIRECTOR OF TRAINING, PUBLICATION AND SUPERVISION REGULATIONS, 2019.

V. THE KARNATAKA STATE RURAL DEVELOPMENT AND PANCHAYAT RAJ UNIVERSITY APPOINTMENT, POWERS, FUNCTIONS AND CONDITIONS OF SERVICE OF THE DIRECTOR OF RESEARCH, INNOVATION AND EVALUATION REGULATIONS, 2019.

VI. THE KARNATAKA STATE RURAL DEVELOPMENT AND PANCHAYAT RAJ UNIVERSITY TEACHERS' SENIORITY REGULATIONS, 2019

VII. THE KARNATAKA STATE RURAL DEVELOPMENT AND PANCHAYAT RAJ UNIVERSITY CONVOCATION FOR CONFERRING DEGREES REGULATIONS, 2019.

VIII. THE KARNATAKA STATE RURAL DEVELOPMENT AND PANCHAYAT RAJ UNIVERSITY AWARD OF HONORARY DEGREES OR ACADEMIC DISTINCTIONS AT THE ANNUAL CONVOCATIONS REGULATIONS, 2019.

IX. THE KARNATAKA STATE RURAL DEVELOPMENT AND PANCHAYAT RAJ UNIVERSITY INSTITUTION OF ENDOWMENTS, FELLOWSHIPS, TRAVELING FELLOWSHIPS, SCHOLARSHIPS, STUDENTSHIPS, EXHIBITIONS, STIPENDS, MEDALS AND PRIZES REGULATIONS, 2019.

X. KARNATAKA STATE RURAL DEVELOPMENT AND PANCHAYAT RAJ UNIVERSITY (CLASSIFICATION, CONTROL AND APPEAL) RULES, 2019

XI. THE KARNATAKA STATE RURAL DEVELOPMENT AND PANCHAYAT RAJ UNIVERSITY (ARRANGEMENTS FOR TRANSPORT, FOOD AND ACCOMMODATION TO UNIVERSITY STUDENTS DURING FIELD VISITS / PROJECT WORK / INTERNSHIP) REGULATIONS, 2019.

XII. REGULATIONS GOVERNING ESTABLISHMENT AND FUNCTIONS OF CENTRALIZED PLACEMENT CELL, 2019.

XIII. THE KARNATAKA STATE RURAL DEVELOPMENT AND PANCHAYAT RAJ UNIVERSITY (CONSTITUTION OF STANDING COMMITTEE AND APPOINTMENT OF AD-HOC COMMITTEES) REGULATIONS, 2019

**ಪರಾಮರ್ಷನ ಟಿಪ್ಪಣಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016 ರ ಪ್ರಕರಣ 56 ರಲ್ಲಿ ವಿನಿಮಯಗಳನ್ನು ರಚಿಸುವ ಅವಕಾಶವಿದೆ.

ವಿಶ್ವವಿದ್ಯಾಲಯಗಳ ಶಿಕ್ಷಕರ ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಮತ್ತು ಬಡ್ತಿಗೆ ಸಂಬಂಧಿಸಿದಂತೆ 2018 ರ ಯು.ಜಿ.ಸಿ ವಿನಿಯಮಗಳನುಸಾರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳು ರಚಿಸಲಾಗಿದ್ದ ಕರಡು ವಿನಿಯಮಗಳನ್ನು ದಿನಾಂಕ 06-08-2018 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಪ್ರಥಮ ಸಾಮಾನ್ಯ ಸಭೆಯಲ್ಲಿ ಪರಿಗಣಿಸಿ ಅನುಮೋದಿಸಲಾಗಿತ್ತು. ಆದರೆ, ಕೇಂದ್ರದ 7ನೇ ವೇತನ ಆಯೋಗದ ಶಿಫಾರಸುಗಳನ್ವಯ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಗಳನ್ನು ದಿನಾಂಕ 01-01-2016ರಿಂದ ಜಾರಿಗೆ ಬರುವಂತೆ ರಾಜ್ಯದ ವಿಶ್ವವಿದ್ಯಾಲಯಗಳ ಮತ್ತು ಕಾಲೇಜು ಅಧ್ಯಾಪಕರುಗಳಿಗೆ ವಿಸ್ತರಿಸುವ ವಿಷಯ ಸರ್ಕಾರದ ಪರಿಗಣನೆಯಲ್ಲಿದ್ದುದರಿಂದ ಸದರಿ ವಿನಿಯಮಗಳನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿಲ್ಲ. ಈಗ ದಿನಾಂಕ 16-03-2019ರ ಸರ್ಕಾರಿ ಆದೇಶ ಸಂಖ್ಯೆ ಇಡಿ 483 ಯುಎನ್ಇ 2017ರಲ್ಲಿ ರಾಜ್ಯ ಸರ್ಕಾರ ಯು.ಜಿ.ಸಿ ವೇತನ ಶ್ರೇಣಿಗಳನ್ನು ಮತ್ತು ಇತರೆ ಷರತ್ತುಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಪರಿಷ್ಕೃತ ವೇತನ ಶ್ರೇಣಿಗಳನ್ನು ಮತ್ತು ಇತರೆ ಷರತ್ತುಗಳನ್ನು ಅಳವಡಿಸಿಕೊಂಡು ದಿನಾಂಕ 06-08-2018ರಂದು ಶೈಕ್ಷಣಿಕ ಪರಿಷತ್ತು ಅನುಮೋದಿಸಿದ್ದ ವಿನಿಯಮಗಳನ್ನು ಮಾರ್ಪಡಿಸಲಾಗಿದೆ. ಈ ವಿನಿಯಮಗಳನ್ನು (ಕ್ರಮ ಸಂಖ್ಯೆ I) ದಿನಾಂಕ 26-04-2019ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಮರು ಪರಿಗಣನೆಗೆ ಮಂಡಿಸಲಾಗಿದೆ.

B. Thimmegowda

ಮುಂದುವರೆದು, ಯು.ಜಿ.ಸಿ-2018ರ ವಿನಿಯಮಗಳನ್ವಯ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ವಿನಿಮಯಗಳನ್ನು ರಚಿಸಿರುವುದರಿಂದ ಶಿಕ್ಷಕರ ಮತ್ತು ಇತರ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಹಾಗೂ ವೃತ್ತಿ ಪ್ರಗತಿ ಬಡ್ತಿಗೆ ಸಂದರ್ಶನ ನಡೆಸುವ ಕ್ರಮಗಳ ಕುರಿತು ವಿನಿಯಮಗಳನ್ನು ರಚಿಸುವ ಅಗತ್ಯತೆ ಇರುವುದರಿಂದ ಪ್ರಕರಣ 56 ಮತ್ತು 64ರಡಿ ವಿನಿಯಮಗಳನ್ನು (ಕ್ರಮ ಸಂಖ್ಯೆ II) ರಚಿಸಲಾಗಿದೆ. ಸದರಿ ವಿನಿಯಮಗಳನ್ನು ದಿನಾಂಕ 26-04-2019ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಮಂಡಿಸಲಾಗಿದೆ.

ಕ್ರಮ ಸಂಖ್ಯೆ III, IV, V ಮತ್ತು VIರಲ್ಲಿರುವ ಕರಡು ವಿನಿಯಮಗಳನ್ನು ದಿನಾಂಕ 06-08-2018 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಮತ್ತು ಕ್ರಮ ಸಂಖ್ಯೆ VII, VIII, IX ಮತ್ತು X ರಲ್ಲಿರುವ ಕರಡು ವಿನಿಯಮಗಳನ್ನು ದಿನಾಂಕ 05-01-2019ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ವಿಶೇಷ ಸಭೆಯಲ್ಲಿ ಅನುಮೋದಿಸಲಾಗಿದೆ. ಹೊಸದಾಗಿ ರಚಿಸಿರುವ ಕ್ರಮ ಸಂಖ್ಯೆ XI, XII, ಮತ್ತು XIIIರಲ್ಲಿರುವ ಕರಡು ವಿನಿಯಮಗಳನ್ನು ದಿನಾಂಕ 26-04-2019ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಮಂಡಿಸಲಾಗಿದೆ. ಶೈಕ್ಷಣಿಕ ಪರಿಷತ್ತಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಒದಗಿಸಲಾಗುವುದು.

ಮೇಲೆ ತಿಳಿಸಿದಂತೆ ಶೈಕ್ಷಣಿಕ ಪರಿಷತ್ತಿನ ಸಭೆಗಳಲ್ಲಿ ಪರಿಗಣಿಸಲಾಗಿರುವ ವಿನಿಯಮಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**Reference Note:**

**Section 56** of the Karnataka State Rural Development and Panchayat Raj University Act, 2016 deals with Regulations.

The draft Regulations governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres as per the UGC Regulations, 2018, framed by the First Vice Chancellor have been approved by the Academic Council in its meeting held on 6th August 2018. However, they could not be submitted to the Government as the issue of extension of revised UGC pay scales as per 7th Central Pay Commission to the teachers and other academic staff of the Universities in Karnataka was under consideration by the State Government. Now, the State Government vide Order No. ED 483 UNE 2017, dated 16th March 2019 have issued orders revising the existing pay scales of the Teachers, Librarians, Physical Education and equivalent cadres in Universities in the State coming under the purview of Higher Education Department with effect from 01.01.2016. Therefore, the draft Regulations governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres as per the UGC Regulations, 2018, as approved by the Academic Council on 6th August 2018 have been modified by adopting the revised UGC pay scales and other conditions as per above Government Order dated 16th March 2019 and the same (Sl.No.I) were placed before the Academic Council in the meeting held on 26-04-2019 for re-consideration and approval.

Further, consequent to framing of Regulations Governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres, 2019 as per the UGC Regulations of 2018, it has become necessary to have Regulations relating to manner of conducting interview for appointment of Teachers and other Academic Staff. Therefore, draft Regulations (Sl.No.II) have been framed under Section 56 read with Section 64 of the Karnataka State Rural Development and Panchayat Raj University Act, 2016 as per UGC Regulations and were placed before

B. Thimmegowda

the Academic Council in its meeting held on 26th April 2019 for consideration and approval.

The draft Regulations listed above at Sl.No. III, IV, V and VI were approved by the Academic Council in its meeting held on 6th August 2018 and the draft Regulations at Sl. No. VII, VIII, IX and X were approved by the Academic Council in its Special meeting held on 5th January 2019. The new draft Regulations at Sl.No. XI, XII and XIII have been placed in the Academic Council in its meeting held on 26-04-2019. The Proceedings of the Academic Council meeting will be provided in the meeting.

The above draft Regulations considered by the Academic Council are placed before the Executive Council for consideration and approval.

*ನಿರ್ಣಯ:*

ಕಾಯನಿರ್ವಾಹಕ ಪರಿಷತ್ತು ಮೇಲೆ ಪಟ್ಟಿಮಾಡಿದ 13 ವಿನಿಮಯಗಳನ್ನು ಶೈಕ್ಷಣಿಕ ಪರಿಷತ್ತಿನ ನಿರ್ಣಯಗಳೊಂದಿಗೆ ಪರಿಗಣಿಸಿತು. ಸುಧೀರ್ಘ ಚರ್ಚೆಯ ನಂತರ ಶೈಕ್ಷಣಿಕ ಪರಿಷತ್ತು ಸೂಚಿಸಿರುವ ತಿದ್ದುಪಡಿಗಳೊಂದಿಗೆ ಹಾಗೂ ಯು.ಜಿ.ಸಿ ವಿನಿಮಯಗಳು ಮತ್ತು ರಾಜ್ಯ ಸರ್ಕಾರದ ಆದೇಶಗಳನ್ವಯ ವಿನಿಮಯಗಳನ್ನು ಅನುಮೋದಿಸಿ, ರಾಜ್ಯ ಸರ್ಕಾರಕ್ಕೆ/ಕುಲಾಧಿಪತಿಗಳಿಗೆ ಸಲ್ಲಿಸಲು ಮುಂದಿನ ಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧೀಕರಿಸಿತು.

***RESOLUTION:***

**The Executive Council considered the above 13 draft Regulations along with the resolutions of the Academic Council. After detailed deliberations, it approved the same and authorized the Vice Chancellor to incorporate the modifications suggested by the Academic Council, if any, in accordance with the UGC Regulations and the State Government Orders in this regard and take further action for submission to the Chancellor / Government**

**ವಿಷಯ ಸಂಖ್ಯೆ 3: To consider "The Karnataka State Rural Development and Panchayat Raj University Ordinances Governing the Admission of students to various Courses, Scholarship, Payment of Fees, Conduct and Residence of Students, 2019".**

**ಪರಾಮರ್ಷನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 57 ರಲ್ಲಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಪ್ರವೇಶಕ್ಕೆ ಶುಲ್ಕ ವಿಧಿಸುವುದು, ವಿದ್ಯಾರ್ಥಿಗಳಲ್ಲಿ ಶಿಸ್ತು ನಿರ್ವಹಣೆ ಇತ್ಯಾದಿಗಳಿಗೆ ಪರ್ಯಾದೇಶಗಳನ್ನು ಕಲ್ಪಿಸಲು ಅವಕಾಶವಿದೆ. ಪ್ರಕರಣ 57 (2) ರಲ್ಲಿ ಶೈಕ್ಷಣಿಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಪರ್ಯಾದೇಶಗಳ ಕರಡನ್ನು ತಿದ್ದುಪಡಿ ಮಾಡಲು ಕಾರ್ಯನಿರ್ವಾಹಕ ಪರಿಷತ್ತಿಗೆ ಅಧಿಕಾರವಿರುವುದಿಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಕಾರ್ಯನಿರ್ವಾಹಕ ಪರಿಷತ್ ಸೂಚಿಸಬಹುದಾದಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಬಾಗಶಃ ಮರುಪರಿಶೀಲನೆಗಾಗಿ ಕರಡನ್ನು ಶೈಕ್ಷಣಿಕ ಪರಿಷತ್ತಿಗೆ ಹಿಂದಿರುಗಿಸಬಹುದು.

ಅದರಂತೆ, ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ವಿದ್ಯಾರ್ಥಿ ವೇತನ, ಶುಲ್ಕ ಪಾವತಿ, ಶಿಸ್ತು ಪಾಲನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪರ್ಯಾದೇಶಗಳನ್ನು ರಚಿಸಲಾಗಿದೆ. ಇವುಗಳನ್ನು ದಿನಾಂಕ 26-04-2019 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಪರಿಗಣನೆಗೆ ಮಂಡಿಸಲಾಗಿದೆ. ಶೈಕ್ಷಣಿಕ ಪರಿಷತ್ತಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಒದಗಿಸಲಾಗುವುದು.



B-Thimmegowda

ಸದರಿ ಪರ್ಯಾದೇಶಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Reference Note:**

Section 57(1) of the Karnataka State Rural Development and Panchayat Raj University Act, 2016 provides for making Ordinances relating to the admission of the students to the University and the levy of fees for admission to the University and other related matters. Under Sub-Section (2) of Section 57, the Academic Council may propose draft of an Ordinance to the Executive Council and the Executive Council shall not have power to amend the draft but it may reject the proposal or return the draft to the Academic Council for reconsideration, either in whole or in part together with such amendments as the Executive Council may suggest.

Accordingly, a draft Ordinance governing Admission of Students to various Courses, Scholarships, Payment of fees, Conduct and Residence of Students, was placed before the Academic Council in its meeting held on 26th April 2019 for consideration. The Proceedings of the Academic Council meeting will be provided in the meeting. The draft Ordinance is placed before the Executive Council for consideration and approval.

*ನಿರ್ಣಯ:*

**ಕಾಯನಿರ್ವಾಹಕ ಪರಿಷತ್ತು "Ordinances Governing the Admission of students to various Courses, Scholarship, Payment of Fees, Conduct and Residence of Students, 2019" ಪರ್ಯಾದೇಶಗಳನ್ನು ಶೈಕ್ಷಣಿಕ ಪರಿಷತ್ತಿನ ದಿನಾಂಕ 26-04-2019 ರ ನಿರ್ಣಯದೊಂದಿಗೆ ಪರಿಗಣಿಸಿ ಅನುಮೋದಿಸಿತು ಹಾಗೂ ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಕುಲಪತಿಗಳಿಗೆ ಅಧಿಕರಿಸಿತು.**

***RESOLUTION:***

**The Executive Council considered the Ordinance Governing Admission of Students to various Courses, Scholarships, Payment of fees, Conduct and Residence of Students, along with the resolutions of the Academic Council dated 26-04-2019, resolved to approve the same and authorized the Vice Chancellor to take further action for submission to the Chancellor / Government.**

**ವಿಷಯ ಸಂಖ್ಯೆ 4: ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕೋರ್ಸುಗಳ (ಸಿ.ಬಿ.ಸಿ.ಎಸ್) ಪರ್ಯಾದೇಶಗಳಲ್ಲಿ ರ್‍ಯಾಂಕುಗಳನ್ನು ಘೋಷಿಸಲು ಅವಕಾಶ ಕಲ್ಪಿಸುವ ಬಗ್ಗೆ ಕುಲಪತಿಗಳು ಮಾಡಿರುವ ಆದೇಶವನ್ನು ಅನುಮೋದಿಸುವ ಬಗ್ಗೆ.**

**Ratification of the Order made by the Vice Chancellor regarding Declaration of Ranks under CBCS Two years (Four semesters) Masters Degree Programmes in various Schools of the University.**

**ಪರಾಮರ್ಷನ ಟಿಪ್ಪಣಿ:**

ವಿಶ್ವವಿದ್ಯಾಲಯದ ವಿವಿಧ ಶಾಲೆಗಳಲ್ಲಿ ನಡೆಸುತ್ತಿರುವ ಎರಡು ವರ್ಷಗಳು (ನಾಲ್ಕೂ ಸೆಮಿಸ್ಟರ್‌ಗಳು) ಸ್ನಾತಕೋತ್ತರ ಪದವಿ ಕೋರ್ಸು (ಸಿ.ಬಿ.ಸಿ.ಎಸ್)ಗೆ ಸಂಬಂಧಿಸಿದ ಪರ್ಯಾದೇಶಗಳು ದಿನಾಂಕ 19-11-2018 ರಂದು ಕುಲಾಧಿಪತಿಗಳಿಂದ ಅನುಮೋದನೆ/ ಅಂಕಿತಗೊಂಡಿವೆ. ಸದರಿ ಪರ್ಯಾದೇಶದ ಕಂಡಿಕೆ 18.2 ರ

ಪ್ರಕಾರ "The candidates who pass all the semester examination in the first attempts are eligible for ranks provided they secure at least CGPA of 6.00 (Alpha-Sign Grade A).

ಕಂಡಿಕೆ 23 ರಲ್ಲಿ ಈ ಪರ್ಯಾದೇಶದ ಅವಕಾಶಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉಂಟಾದಲ್ಲಿ ಕುಲಪತಿಗಳು ಆದೇಶದ ಮೂಲಕ ಅಧಿನಿಯಮ, ವಿನಿಯಮ ಪರ್ಯಾದೇಶಗಳಿಗೆ ವಿರುದ್ಧವಾಗದ ರೀತಿಯಲ್ಲಿ ಆದೇಶದ ಮೂಲಕ ಅಂತಹ ತೊಂದರೆ ನಿವಾರಣೆಗೆ ಅವಕಾಶ ಕಲ್ಪಿಸಲು ಅಧಿಕಾರ ಹೊಂದಿರುತ್ತಾರೆ. ಕುಲಪತಿಗಳ ಅಂತಹ ಆದೇಶಗಳು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

ಸ್ನಾತಕೋತ್ತರ ಕೋರ್ಸುಗಳನ್ನು ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸುವ ಸಂದರ್ಭದಲ್ಲಿ ಎಷ್ಟು ರ್‍ಯಾಂಕುಗಳನ್ನು ನೀಡಬೇಕೆಂಬ ವಿಷಯದ ಬಗ್ಗೆ ಸ್ಪಷ್ಟೀಕರಣ ಬೇಕಾದ ತೊಂದರೆ ಉದ್ಭವಿಸಿತು. ಸಾಮಾನ್ಯವಾಗಿ ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಮೆರಿಟ್ ಆಧಾರದ ಮೇಲೆ ಮೂರು ರ್‍ಯಾಂಕ್‌ಗಳನ್ನು ಅಂದರೆ, **ಒಂದನೇ ರ್‍ಯಾಂಕ್, ಎರಡನೇ ರ್‍ಯಾಂಕ್** ಮತ್ತು **ಮೂರನೇ ರ್‍ಯಾಂಕ್‌ಗಳನ್ನು** ಘೋಷಿಸುವ ಪದ್ಧತಿ ಇರುತ್ತದೆ. ಇದೇ ಪದ್ಧತಿಯಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಫಲಿತಾಂಶದಲ್ಲಿ ಮೂರು ರ್‍ಯಾಂಕುಗಳನ್ನು ಘೋಷಿಸಲು ಕುಲಪತಿಗಳು ದಿನಾಂಕ 22-02-2019 ರ ಆದೇಶದ ಮೂಲಕ ಅವಕಾಶ ಕಲ್ಪಿಸಿದ್ದಾರೆ. ಆದೇಶದ ಪ್ರತಿಯನ್ನು ಅನುಬಂಧ-'ಅ'ನಲ್ಲಿ ಲಗತ್ತಿಸಲಾಗಿದೆ.

ಮೇಲಿನಂತೆ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಗೆ ಮಂಡಿಸಲಾಗಿದೆ.

**Reference Note:**

The Ordinances Governing the Choice Based Credit System for Two Years (Four semesters) Masters Degree Programmes in various Schools of the University, have been assented by the Chancellor on 19-11-2018. Clause 18.2 of the Ordinances contemplates that "The candidates who pass all the semester examinations in the first attempts are eligible for ranks provided they secure at least CGPA of 6.00 (Alpha-Sign Grade A). Clause 23 deals with *"POWER TO REMOVE DIFFICULTIES"*, ie., *i) If any difficulty arises in giving effect to the provisions of these Ordinances, the Vice-Chancellor may by order make such provisions not inconsistent with the Act, Statutes, Ordinances or other Regulations, as appears to be necessary or expedient to remove the difficulty. ii) Every order made under this rule shall be subject to ratification by the Appropriate University Authorities.*

While declaring the results of PG examinations, a difficulty has arisen as to the **number of ranks** to be declared in each P.G. Programme after successful completion of two years Course by the students in all the semester examinations. Normally, in all the conventional Universities in the State, three ranks ie., I Rank, II Rank and III Rank, are declared based on the percentage of marks/CGPA secured by the students in first attempt in all the semesters of the Postgraduate Programmes/Courses.

In the above circumstances, the Vice Chancellor in exercise of the powers conferred under Clause 23 (i) of the Ordinances Governing the Choice Based Credit System for Two Years (Four semesters) Masters Degree Programmes in various Schools of the University, by an Order No. RDPRU 01 ACA 2019, dated 22-02-2019 made a provision for declaration of **Three Ranks** Viz., **First Rank, Second Rank and Third Rank**, in each of the Postgraduate Programme conducted in the University based on the percentage of marks/CGPA secured by the candidates in the examinations of all the Semesters of the Course in first attempt. A copy of the said Order is attached as **Annexure-A.**

B. Thimmegowda

The action taken by the Vice Chancellor as above, is placed before the Executive Council for ratification.

*ನಿರ್ಣಯ:*

ಆದೇಶ ಸಂಖ್ಯೆ RDPRU 01 ACA 2019, ದಿನಾಂಕ 22-02-2019 ರ ಮೂಲಕ ವಿಶ್ವವಿದ್ಯಾಲಯ ನಡೆಸುವ ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಶೇಕಡಾವಾರು ಅಂಕಗಳ/CGPA ಆಧಾರದ ಮೇಲೆ ಮೂರು ರ್‍ಯಾಂಕುಗಳನ್ನು ನೀಡಲು ಅವಕಾಶ ಕಲ್ಪಿಸಿರುವ ಕುಲಪತಿಗಳ ಕ್ರಮವನ್ನು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಿತು.

***RESOLUTION:***

**The Executive Council ratified the action taken by the Vice Chancellor in making a provision for declaration of Three Ranks Viz., First Rank, Second Rank and Third Rank, in each of the Postgraduate Programme conducted in the University based on the percentage of marks/CGPA secured by the candidates in the examinations of all the Semesters of the Course in first attempt vide Order No. RDPRU 01 ACA 2019, dated 22-02-2019.**

**TABLE AGENDA: 1: To consider "The Karnataka State Rural Development and Panchayat Raj University (Constitution, Powers and Function of Library Committee) Regulations, 2019".**

*ನಿರ್ಣಯ:*

ಕಾರ್ಯನಿರ್ವಾಹಕ ಪರಿಷತ್ತು **"The Karnataka State Rural Development and Panchyat Raj University (Constitution, Powers and Functions of Library Committee) Regulations, 2019"** ಅನ್ನು ಶೈಕ್ಷಣಿಕ ಪರಿಷತ್ತಿನ ನಿರ್ಣಯದೊಂದಿಗೆ ಪರಿಗಣಿಸಿ ಅನುಮೋದಿಸಿತು ಹಾಗೂ ಇವುಗಳನ್ನು ಕುಲಾಧಿಪತಿಗಳಿಗೆ/ ಸರ್ಕಾರಕ್ಕೆ ಸಲ್ಲಿಸಲು ಮುಂದಿನ ಕ್ರಮ ಕೈಗೊಳ್ಳಲು ಕುಲಪತಿಗಳಿಗೆ ಅಧಿಕರಿಸಿತು.

***RESOLUTION:***

**The Executive Council considered the "The Karnataka State Rural Development and Panchayat Raj University (Constitution, Powers and Function of Library Committee) Regulations, 2019" along with the resolution of the Academic Council, resolved to approve the same and authorized the Vice Chancellor to take further action for submission to the Chancellor / Government.**

**TABLE AGENDA: 2:** ಸ್ಟೂಡೆಂಟ್ ಡೆಸ್ಕ್‌ಗಳು ಹಾಗೂ ಚೇರ್‌ಗಳ ಪೂರೈಕೆ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುಮೋದನೆ ನೀಡುವ ಕುರಿತು (ದಿನಾಂಕ 29-04-2019 ರಂದು ಬೆಳಿಗ್ಗೆ 10.00 ಗಂಟೆಗೆ ಜರುಗಿದ ನಾಲ್ಕನೆಯ ಖರೀದಿ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸುವ ಬಗ್ಗೆ).

*ನಿರ್ಣಯ:*

ಕಾರ್ಯನಿರ್ವಾಹಕ ಪರಿಷತ್ತು ದಿನಾಂಕ 29-04-2019 ರಂದು ಬೆಳಗ್ಗೆ 10.00 ಗಂಟೆಗೆ ಜರುಗಿದ ಖರೀದಿ ಸಮಿತಿ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಬೆಂಚು ಮತ್ತು ಕುರ್ಚಿಗಳನ್ನು ಖರೀದಿ ಮಾಡುವ ಬಗ್ಗೆ ಮಾಡಿರುವ ಶಿಫಾರಸು ಮತ್ತು ನಡವಳಿಗಳನ್ನು ಅನುಮೋದಿಸಲು ನಿರ್ಣಯಿಸಿತು.

B. Thimmegowda

***RESOLUTION:***

**The Executive Council resolved to approve the Proceedings and recommendations of the Purchase Committee meeting held on 29/04/2019 at 10.00 a.m. regarding the purchase of Students' Desks and Chairs.**

The meeting concluded with thanks to the Members and the Chair.

Registrar
Ex-Officio Member Secretary

Vice Chancellor
Chairperson